

ಅವರಿಗೆ ನೋವಾಗುತ್ತದೆ.
ಒಮ್ಮೆ ನಿಮ್ಮ ಬಗ್ಗೆ ಅವರಿಗೆ ಇಷ್ಟವಾಗದಿದ್ದರೆ
ಮತ್ತೆಂದೂ ನಿಮ್ಮನ್ನವರು ಕರೆಯುವುದಿಲ್ಲ.

ನಿಮಗೆ ನನ್ನ ವಿಳಾಸ ಕೊಡುವುದಿಲ್ಲ,
ಬರುವುದಾದರೆ ನೀವು 'ಉರುಕ' ಹಬ್ಬದ ದಿನ ಬನ್ನಿ,
ಕುಣಿಯಲು ಬರುವುದಿಲ್ಲವೆಂದು ಮಾತ್ರ ನಿರಾಕರಿಸಬೇಡಿ,
ನನ್ನೂರಿನ ತರುಣ ತರುಣಿಯರು 'ಕುಣಿಯೋಣ ಬನ್ನಿ' ಎಂದು
ಕರೆದರೆ
'ಕುಣಿಯಲು ಬಾರದು ನನಗೆ' ಎಂದು ಹೇಳಲೇಬೇಡಿ,
ಆದರಿಂದ ಅವರಿಗೆ ನೋವಾಗುತ್ತದೆ,
'ಕಾರ್ಪೊಂಗ್‌ಪುಲಿ' ರಾತ್ರಿಯೇ ಹಿಂತಿರುಗಿ ಹೋಗುತ್ತೇನೆನ್ನಬೇಡಿ,
ಆಗಲೂ ಅವರಿಗೆ ಬೇಸರವಾಗುತ್ತದೆ,
ಅಮಲೇರಿ ಕುಣಿಯುವಾಗ ಹುಡುಗಿಯರ ಮೈಯೆಡೆಗೆ ಕೈಚಾಚಬೇಡಿ
ಅವರಿಗೆ ನೋವೆನಿಸುತ್ತದೆ
ಜೊತೆಗೆ ನಿಮ್ಮ ತಪ್ಪುನಡವಳಿಕೆ ಬಗ್ಗೆ
ಊರ ಸರಪಂಚನಿಗೆ ಸುದ್ದಿ ಮುಟ್ಟುತ್ತದೆ.

ನನ್ನೂರಿಗೆ ಬರಲು ನಿರ್ಧರಿಸುವ ಮೊದಲು
ಎರಡು ಬಾರಿ ಯೋಚಿಸಿ,
ನಾನು ನನ್ನ ವಿಳಾಸ ಕೊಡುವುದಿಲ್ಲ.

(ಅಸ್ಸಾಮಿಯಿಂದ ಇಂಗ್ಲಿಷ್‌ಗೆ: ಲೈರ ನಿಯೊ ಬೋರ)

ಟಿಪ್ಪಣಿಗಳು: 1. ಅಲುಪೊರ: ಅಸ್ಸಾಮಿನ ಗೋಲಘಾಟ್ ಜಿಲ್ಲೆಯ ಪುಟ್ಟ ಹಳ್ಳಿ, 2. ಗೇಲಾಬಿಲ್: ಅಸ್ಸಾಮಿನ ಗೊಲಾಘಾಟ್ ಜಿಲ್ಲೆಯಲ್ಲಿರುವ ಸಣ್ಣಹೊಳೆ, 3. ಚರಾಯ್‌ಪುಂಗ್, ಲಿಖೀಪಥರ್: ಅಸ್ಸಾಮಿನ ಉಲ್ಫಾ ಭಯೋತ್ಪಾದಕರಿಗೆ ಆಶ್ರಯ ನೀಡಿದ್ದ ಎರಡು ಕಾಡುಗಳು, 4. ಅಪಾಂಗ್: ಮಿಸಿಂಗ್ ಬುಡಕಟ್ಟಿನವರು ತಯಾರಿಸುವ ಸಿಹಿ ಮಾದಕ ಪಾನೀಯ, 5. ಗೋರ್ರೈ ಮಚ್: ಅಸ್ಸಾಂನ ಕೆಸರು ನೀರಿನಲ್ಲಿ ಸಿಗುವ ಮೀನು, 6. ಉರುಕ: ಅಸ್ಸಾಂನ ಸುಗ್ಗಿಹಬ್ಬದ ಹಿಂದಿನ ದಿನ, 7. ಕಾರ್ಪೊಂಗ್‌ಪುಲಿ: ಹುಣ್ಣಿಮೆ ಇರುಳಿನ ಶುಭ್ರ ಆಕಾಶ

ಕಲೆ: ನಂಜುಂಡಸ್ವಾಮಿ